**ಸಿ ಸಿ ನಂ. 2053/2024**

**ಪಿ.ಡಬ್ಲ್ಯೂ- 1**

**ಸಾಕ್ಷಿಯು ದಿನಾಂಕಃ 22-10-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಡಿ ವಿ ಆರ್., ವಕೀಲರಿಂದ</u>**

ನಾನು ಈಗಾಗಲೇ ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಸತ್ಯದಿಂದ ಕೂಡಿರುತ್ತವೆ. ಅದರಲ್ಲಿನ ಸಹಿ ನನ್ನದೇ ಆಗಿರುತ್ತದೆ.

ದಿಃ **19-01-2024** ರ ಚೆಕ್ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **1** ಎಂದು ಗುರುತಿಸಲಾಯಿತು. ದಿಃ **20-01-2024** ರ ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿಃ **2** ಎಂದು ಗುರುತಿಸಲಾಯಿತು. ದಿಃ **16-02-2024** ರಂದು ಆರೋಪಿಗೆ ನೀಡಿರುವ ಲೀಗಲ್ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **3** ಎಂದು ಗುರುತಿಸಲಾಯಿತು. ನೋಟಿಸ್ ಜಾರಿಯಾದ ಬಗ್ಗೆ ಪೋಸ್ಟ ಮಾಸ್ಟರ್ ರವರು ನೀಡಿರುವ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **4** ಎಂದು ಗುರುತಿಸಲಾಯಿತು. ಆರೋಪಿಯ ಸಾಲದ ಖಾತೆಯ ಲೆಡ್ಜರ್ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **5** ಎಂದು ಗುರುತಿಸಲಾಯಿತು. ದಿಃ **05-01-2024** ರಂದು ನಮ್ಮ ಸಹಕಾರಿ ಸಂಘದವರು ಆರೋಪಿಗೆ ನೀಡಿದ ನೋಟಿಸ್ ನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **6** ಎಂದು ಗುರುತಿಸಲಾಯಿತು. ಪ್ರಕರಣ ನಡೆಸಲು ನನಗೆ ಅಧಿಕಾರ ನೀಡಿದ ಬಗ್ಗೆ ಸಭಾ ನಡುವಳಿಗಳ ನಿಜ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- **7** ಎಂದು ಗುರುತಿಸಲಾಯಿತು.

**ಸಿ ಸಿ ನಂ. 2053/2024**

**ಪಿ.ಡಬ್ಲ್ಯೂ- 1**

**<u>ಪಾಟೀಸವಾಲು:</u>** ಆರೋಪಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ., ಹೊಸಪೇಟೆ.